***ಸಾಕ್ಷಿಯನ್ನು ದಿಃ 23.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದಃ–***

***ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ. ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಗಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.***

| | |
|---|---|
| *ನಿಪಿ.1* | *ಪ್ರಥಮ ವರ್ತಮಾನ ವರದಿ ಮತ್ತು ದೂರಿನ ದೃಢೀಕೃತ ನಕಲು* |
| *ನಿಪಿ.2* | *ಸ್ಥಳ ಮಹಜರಿನ ದೃಢೀಕೃತ ನಕಲು* |
| *ನಿಪಿ.3* | *ಗಾಯದ ಪ್ರಮಾಣಪತ್ರದ ದೃಢೀಕೃತ ನಕಲು* |
| *ನಿಪಿ.4* | *ಅಂತಿಮ ವರದಿಯ ದೃಢೀಕೃತ ನಕಲು* |
| *ನಿಪಿ.5* | *ಕೆಎ–11/ಇಕೆ–1563 ರ ಮೋಟಾರ್ ಸೈಕಲ್ ನ ನೋಂದಣಿ ಪ್ರಮಾಣಪತ್ರದ ದೃಢೀಕೃತ ನಕಲು* |
| *ನಿಪಿ.6* | *1 ನೇ ಎದುರುದಾರರ ನೋಟರಿ ದೃಢೀಕೃತ ಚಾಲನೆ ಪರವಾನಿಗೆಯ ಪತ್ರ* |
| *ನಿಪಿ.7* | *ಅರ್ಜಿದಾರರ ನೋಟರಿ ದೃಢೀಕೃತ ಅಧಾರ್ ಕಾರ್ಡು* |
| *ನಿಪಿ.8* | *ಅರ್ಜಿದಾರರ ನೋಟರಿ ದೃಢೀಕೃತ ಪಾನ್ ಕಾರ್ಡು* |
| *ನಿಪಿ.9* | *ವ್ಯವಸ್ಥಾಪಕರು ದೃಢೀಕರಿಸಿದ ಬ್ಯಾಂಕ್ ಪಾಸ್ ಪುಸ್ತಕ ನಿಪಿ ಎಂದು ಗುರ್ತಿಸಲಾಯಿತು.* |

*ನಿಪಿ.7 ರಿಂದ 9ರ ಅಸಲು ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಲಯ ಸ್ವತಃ ಪರಿಶೀಲನೆ ಮಾಡಿ ಮುಕ್ತ ನ್ಯಾಯಾಲಯದಲ್ಲಿ ಅರ್ಜಿದಾರರ ವಶಕ್ಕೆ ಹಿಂದಿರುಗಿಸಲಾಗಿರುತ್ತದೆ.*

***ಅರ್ಜಿದಾರರ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***